ಈ) ಹಿಂದಿನ ಅಧಿವೇಶನದಲ್ಲಿ ಈ ಬಗ್ಗೆ ಕೇಳಿದ ಪ್ರಶ್ನೆಗೆ ಭೂಪರಿಹಾರವನ್ನು ಹೊರತುಪಡಿಸಿ ಬೇರೆ ಯಾವುದೇ ಭರವಸೆಯನ್ನು ನೀಡಿರುವುದಿಲ್ಲ ಎಂದು ಉತ್ತರಿಸಿರುವುದು ನಿಜವಲ್ಲವೇ?

ಉ) ಸರಕಾರಿ ಆದೇಶ ಸಂಖ್ಯೆ: ಆರ್.ಡಿ.118 ಆರ್.ಡಿ.ಎಫ್.91 ದಿನಾಂಕ:30-4-97ರ ಅನ್ವಯ ಸಂಸ್ಥೆಗಳು ನೀಡಬೇಕಾದ ಸೌಲಭ್ಯಗಳನ್ನು ಈ ಪ್ರಕರಣಗಳಲ್ಲಿ ಒದಗಿಸಿಕೊಡಲಾಗಿದೆಯೇ?

ಊ) ಇಲ್ಲವಾದಲ್ಲಿ, ಕಾರಣಗಳೇನು ಹಾಗೂ ಹೌದಾದಲ್ಲಿ ವಿವರಗಳೇನು?

ಋ) ಸಂಬಂಧಪಟ್ಟ ಪರಿಹಾರಗಳನ್ನು ಅನುಷ್ಠಾನಗೊಳಿಸುವ ಅಧಿಕಾರಿ ಮತ್ತು ಪ್ರಾಧಿಕಾರ ಯಾವುದು?

ಶ್ರೀ ಪಿ.ಜಿ.ಆರ್. ಸಿಂಧ್ಯ (ಭಾರೀ ಮತ್ತು ಮಧ್ಯಮ ಹಾಗೂ ಸಣ್ಣ ಕೈಗಾರಿಕಾ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು):

ಅ) ಭೂಸ್ವಾಧೀನಪಡಿಸಿಕೊಳ್ಳುವ ಪೂರ್ವದಲ್ಲಿ ಭೂಮಾಲೀಕರಿಗೆ ಭೂಪರಿಹಾರ ನೀಡುವ ಹೊರತು ಯಾವುದೇ ಬೇರೆ ಭರವಸೆಯನ್ನು ಕೆ.ಐ.ಎ.ಡಿ.ಬಿ.ಮತಿಯಿಂದ ನೀಡಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಅನ್ವಯಿಸುವುದಿಲ್ಲ.

ಈ) ಹೌದು.

ಉ) ಸದರಿ ಆದೇಶವು ಪವರ್ ಪ್ಲಾಂಟ್‌ಗಳನ್ನು ಸ್ಥಾಪಿಸಲು ಭೂಸ್ವಾಧೀನಪಡಿಸಲಾದ ಪ್ರಕರಣಗಳಲ್ಲಿನ ಕುಟುಂಬಗಳನ್ನೆ ಪುನರ್‌ವಸತಿ ಕಲ್ಪಿಸುವುದಕ್ಕೆ ಸಂಬಂಧಿಸಿರುತ್ತದೆ. ಈ ಪ್ರಕರಣದಲ್ಲಿ ಯಾವ ಕುಟುಂಬಗಳು ಇರದೇ ಇದ್ದುದರಿಂದ ಪುನರ್‌ವಸತಿ ಕಲ್ಪಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಊ) ಅನ್ವಯಿಸುವುದಿಲ್ಲ.

ಋ) ಅನ್ವಯಿಸುವುದಿಲ್ಲ.

1824(2325) ಶ್ರೀ ಕೃಷ್ಣ ಪಾಲೇಮಾರ್ ಜೆ.(ಸುರತ್ಕಲ್): ಮಾನ್ಯ ಭಾರಿ, ಮಧ್ಯಮ ಮತ್ತು ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಸಣ್ಣ ಕೈಗಾರಿಕೆಗಳಿಗಾಗಿ ಕೆ.ಎಸ್.ಎಫ್.ಸಿ. ಮೂಲಕ ತಂತ್ರಜ್ಞಾನ ಅಭಿವೃದ್ಧಿ ಮತ್ತು ಆಧುನೀಕರಣಕ್ಕಾಗಿ ನಿಧಿ ಒದಗಿಸುವ ಟಿ.ಡಿ.ಎಂ.ಎಫ್. ಯೋಜನೆಯ ವಿವರಗಳೇನು;

ಆ) ಈ ಯೋಜನೆಯನ್ವಯ ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರಿನಲ್ಲಿ 10 ಸಣ್ಣ ಕೈಗಾರಿಕಾ ಘಟಕಗಳು ಸಾಲಪಡೆದ ಒಟ್ಟು ಮೊತ್ತ ಎಷ್ಟು;

ಇ) ಅದಕ್ಕೆ ವಿಧಿಸಲಾದ ಬಡ್ಡಿ ಪ್ರಮಾಣ ಎಷ್ಟು;

ಈ) ಬಡ್ಡಿ ಹಣದಲ್ಲಿ ಶೇ.4 ರಷ್ಟು ಮೊತ್ತವನ್ನು ಸಹಾಯಾರ್ಥವಾಗಿ ಕೈಗಾರಿಕಾ ಘಟಕಗಳಿಗೆ ಹಿಂದಿರುಗಿಸಬೇಕಾಗಿರುವುದು ನಿಜವಲ್ಲವೆ.

ಉ) ಹೌದಾದಲ್ಲಿ ಆ ಕುರಿತು ವಿವರಗಳೇನು;

ಊ) ಒಟ್ಟು ಸಹಾಯಧನದ ಮೊತ್ತದಲ್ಲಿ ಎಷ್ಟು ಹಣವನ್ನು ಪಾವತಿಸಲಾಗಿದೆ;

ಋ) ಬಾಕಿ ಹಣವನ್ನು ಪಾವತಿಸುವಲ್ಲಿನ ವಿಳಂಬಕ್ಕೆ ಕಾರಣಗಳೇನು ಹಾಗೂ ಯಾವಾಗ ಪಾವತಿಸಲಾಗುವುದು.

ಖೂ) ಕೈಗಾರಿಕೆಗಳ ದುರವಸ್ಥೆಗೆ ಕಾರಣವಾದ ಕೆ.ಎಸ್.ಎಫ್.ಸಿ. ವಿಧಿಸುತ್ತಿರುವ ಬಡ್ಡಿ ಹೆಚ್ಚಳವನ್ನು ಕಡಿಮೆ ಮಾಡಲು ಕ್ರಮ ಜರುಗಿಸುವರೇ;

ಶ್ರೀ ಪಿ.ಜಿ.ಆರ್. ಸಿಂಧ್ಯ (ಭಾರಿ, ಮಧ್ಯಮ ಮತ್ತು ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಸಚಿವರು):

ಅ) ಈಗಾಗಲೇ ಇರುವ ಸಣ್ಣ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳು ಉತ್ಪಾದನಾ ಸೌಲಭ್ಯಗಳನ್ನು ಉತ್ತಮಪಡಿಸಲು ತಂತ್ರಜ್ಞಾನದ ಉನ್ನತೀಕರಣ ಮತ್ತು ಆಧುನೀಕರಣದ ಮೂಲಕ ಉತ್ಪಾದನೆ, ಗುಣಮಟ್ಟ ಇತ್ಯಾದಿಗಳನ್ನು ಸುಧಾರಿಸಿ ಸ್ಥಳೀಯ ಮತ್ತು ಅಂತರರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ಯಶಸ್ವಿಯಾಗಿ ಸ್ಪರ್ಧಿಸಲು ಸಹಾಯವಾಗುವಂತೆ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ಮೂಲಕ ತಂತ್ರಜ್ಞಾನ ಅಭಿವೃದ್ಧಿ ಮತ್ತು ಆಧುನೀಕರಣದ ನಿಧಿ ಯೋಜನೆ (ಟಿ.ಡಿ.ಎಂ.ಎಫ್.)ಯನ್ನು ಕಾರ್ಯಗತಗೊಳಿಸಲಾಗುತ್ತಿದೆ.

ಟಿ.ಡಿ.ಎಂ.ಎಫ್. ಯೋಜನೆಯಡಿ ಸಾಲ ಸೌಲಭ್ಯ ಪಡೆದುಕೊಂಡ ಉದ್ಯಮಿಗಳಿಗೆ ಕರ್ನಾಟಕ ಸರ್ಕಾರವು ಶೇ.4ರಷ್ಟು ಬಡ್ಡಿ ಸಹಾಯಧನವನ್ನು ನೀಡುತ್ತಿದೆ. ಈ ಯೋಜನೆಯು ಅಕ್ಟೋಬರ್ 2000ದಿಂದ ಜಾರಿಯಲ್ಲಿದ್ದು, ಕೆ.ಎಸ್.ಎಫ್.ಸಿ. ಮತ್ತು ಕೆ.ಎಸ್.ಐ.ಐ.ಡಿ.ಸಿ.ಯಿಂದ ಸಾಲ ಸೌಲಭ್ಯ ಪಡೆದ ಘಟಕಗಳಿಗೆ ಮಾತ್ರ ಈ ಯೋಜನೆ ಅನ್ವಯವಾಗುತ್ತದೆ.

ಆ) ಫೆಬ್ರವರಿ 2005ರ ಅಂತ್ಯದವರೆಗೆ ಕೆ.ಎಸ್.ಎಫ್.ಸಿ ಸಂಸ್ಥೆಯು ಈ ಯೋಜನೆಯನ್ವಯ 24 ಘಟಕಗಳಿಗೆ 463.30 ಲಕ್ಷ ರೂ.ಗಳ ಸಾಲ ಮಂಜೂರು ಮಾಡಿದೆ.

ಇ) ಈ ಯೋಜನೆಯನ್ವಯ KSFC ಸಂಸ್ಥೆಯು ವಿಧಿಸುತ್ತಿರುವ ಬಡ್ಡಿದರಗಳು ಈ ಕೆಳಕಂಡಂತಿವೆ:

2.00 ಲಕ್ಷ ರೂ.ಗಳ ವರೆಗಿನ ಸಾಲಗಳಿಗೆ –ಶೇ.10.50 (ನಿವ್ವಳ)

2.00 ಲಕ್ಷ ರೂ.ಗಳ ಮೇಲಿನ ಸಾಲಗಳಿಗೆ –ಶೇ.11.50 (ನಿವ್ವಳ)

ಕರ್ನಾಟಕ ಸರ್ಕಾರವು ಈ ಘಟಕಗಳಿಗೆ ಶೇ.4ರಷ್ಟು ಬಡ್ಡಿ ಸಹಾಯಧನವನ್ನು ನೀಡುತ್ತಿರುವುದರಿಂದ ಅನ್ವಯವಾಗುವ ನಿವ್ವಳ ಬಡ್ಡಿದರವು ಅನುಕ್ರಮವಾಗಿ ವಾರ್ಷಿಕ ಶೇ.6.50 ಮತ್ತು ಶೇ.7.50 ರಷ್ಟಾಗಿರುತ್ತದೆ.

ಈ) ನಿಜ.

ಉ) ಹಣಕಾಸು ಸಂಸ್ಥೆಗಳಿಗೆ ಸಾಲದ ಕಂತುಗಳನ್ನು ನಿಗದಿತ ಅವಧಿಯಲ್ಲಿ ಮರುಪಾವತಿ ಮಾಡುತ್ತಿರುವ ಘಟಕಗಳಿಗೆ ಈ ಯೋಜನೆಯನ್ವಯ ಕರ್ನಾಟಕ ಸರ್ಕಾರವು ಶೇ.4ರಷ್ಟು ಬಡ್ಡಿ ಸಹಾಯಧನ ನೀಡುತ್ತಿದೆ.

ಊ) ಕರ್ನಾಟಕ ಸರ್ಕಾರವು ಜೂನ್ 2003ರ ಅಂತ್ಯದವರೆಗೆ 225.00 ಲಕ್ಷ ರೂ.ಗಳ ಬಡ್ಡಿ ಸಹಾಯಧನವನ್ನು ಬಿಡುಗಡೆ ಮಾಡಿದೆ. ಸರ್ಕಾರವು ಬಿಡುಗಡೆ ಮಾಡಿರುವ ಬಡ್ಡಿ ಸಹಾಯಧನದ ವರ್ಷವಾರು ವಿವರಗಳು ಈ ಕೆಳಕಂಡಂತಿವೆ.

ಕ್ರಮ ಸಂಖ್ಯೆ	ವರ್ಷ	ವಿತರಿಸಿರುವ ಬಡ್ಡಿ ಸಹಾಯಧನ
1	2000–01	25.00
2	2002–03	50.00
3	2003–04	150.00
	ಒಟ್ಟು	225.00

ಈ) 2005–06ನೇ ಸಾಲಿನಲ್ಲಿ ಹಂತಹಂತವಾಗಿ ಹಣ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಊ) ಸಂಸ್ಥೆಯು ಮಂಜೂರು ಮಾಡುವ ಸಾಲಗಳ ಮೇಲೆ ವಿಧಿಸುವ ಬಡ್ಡಿ ದರಗಳು ಸಣ್ಣ ಕೈಗಾರಿಕಾ ಅಭಿವೃದ್ಧಿ ಬ್ಯಾಂಕ್ ಸಂಸ್ಥೆಗೆ ನೀಡುವ ಪುನರ್‌ಧನದ ಬಡ್ಡಿ ದರವನ್ನು ಅವಲಂಬಿಸಿದೆ. ಕಳೆದ 6 ವರ್ಷಗಳಲ್ಲಿ ಸಣ್ಣ ಕೈಗಾರಿಕಾ ಅಭಿವೃದ್ಧಿ ಬ್ಯಾಂಕ್ ಪುನರ್‌ಧನದ ಮೇಲೆ ಬಡ್ಡಿ ದರವನ್ನು ಪರಿಷ್ಕರಿಸಿದ ಕಾರಣ ಆಯಾ ಸಮಯದಲ್ಲಿ ಬಡ್ಡಿ ದರವನ್ನು ಸಂಸ್ಥೆಯು ಇಳಿಸಿದೆ. ಕೆ.ಎಸ್.ಎಫ್.ಸಿ. ಸಂಸ್ಥೆಯು ಜುಲೈ 2004ರಲ್ಲಿ ಬಡ್ಡಿ ದರವನ್ನು ಪರಿಷ್ಕರಿಸಿದ್ದು ಈಗಿನ ಚಾಲ್ತಿ ಬಡ್ಡಿ ದರಗಳಲ್ಲಿ ನಿಗದಿತ ಸಮಯಕ್ಕೆ ಮರುಪಾವತಿ ಮಾಡಿದರೆ ಶೇ.1ರಷ್ಟು ರಿಯಾಯಿತಿ ನಂತರ ಈ ಕೆಳಗಿನಂತಿವೆ:

50,000 ರೂ.ಗಳ ವರಗಿನ ಸಾಲಗಳಿಗೆ	ಶೇ.10.50
50,000ದ ಮೇಲೆ ಹಾಗೂ 2,00,000 ಗಳವರೆಗೆ	ಶೇ.10.75
2,00,000ದ ಮೇಲೆ ಹಾಗೂ 25,00,000 ಗಳವರೆಗೆ	ಶೇ.11.00
25,00,000ದ ಮೇಲೆ ಸಣ್ಣ ಕೈಗಾರಿಕೆಗಳಿಗೆ	ಶೇ.11.50
ಮಧ್ಯಮ ಪ್ರಮಾಣದ ಕೈಗಾರಿಕೆಗಳಿಗೆ	ಶೇ.12.50

ಇದರ ಜೊತೆಗೆ ಸುಸ್ಥಿಯಾದ ಮೊಬಲಗಿಗೆ ವಾರ್ಷಿಕ ಶೇ.2.5ರಷ್ಟು ಸುಸ್ತಿ ಬಡ್ಡಿ ವಿಧಸಲಾಗುವುದು.

1825(2326) ಶ್ರೀ ಕೃಷ್ಣಪಾಲೇಮಾರ್ ಜೆ. (ಸುರತ್ಕಲ್): ಮಾನ್ಯ ಜವಳಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯ ಕೈಮಗ್ಗ ಅಭಿವೃದ್ಧಿ ನಿಗಮದ ಸದ್ಯದ ಸ್ಥಿತಿಗತಿಗಳೇನು?

ಆ) ಅದು ನಷ್ಟದಲ್ಲಿದೆಯೇ?

ಇ) ಇದ್ದಲ್ಲಿ ಕಾರಣಗಳೇನು (ಕಳೆದ 3 ವರ್ಷಗಳಲ್ಲಿ ಎಷ್ಟು ನಷ್ಟ ಅನುಭವಿಸಿದೆ)?

ಈ) ಕೈಮಗ್ಗ ಹೊಂದಿದ ನೇಕಾರರು ನಿಗಮದಿಂದ ಕಚ್ಚಾ ವಸ್ತು ಪಡೆದು ನೇಯ್ಗೆ ಮಾಡಿ ಕೊಟ್ಟರೆ ಮೀಟರ್‌ಗೆ ಎಷ್ಟು ಬೆಲೆ ಕೊಡಲಾಗುತ್ತಿದೆ?

ಉ) ಅದು ಇಂದಿನ ಬೆಲೆ ಏರಿಕೆಗೆ ಸಮನಾಗಿದೆಯೇ;

ಊ) ಎಷ್ಟು ಜನ ನೇಕಾರರು ನಿಗಮದಲ್ಲಿ ತೊಡಗಿಸಿಕೊಂಡಿದ್ದಾರೆ?

ಋ) ನೇಕಾರರಿಗೆ ಇದುವರೆಗೆ ಸಮರ್ಪಕ ರೀತಿಯಲ್ಲಿ ಕಚ್ಚಾ ವಸ್ತುಗಳನ್ನು ನಿಗಮ ಸರಬರಾಜು ಮಾಡುತ್ತಿದೆಯೇ?

ಋೂ) ಇದ್ದಲ್ಲಿ ಅವರಿಗೆ ವರ್ಷವಿಡೀ ಉದ್ಯೋಗ ದಿನಗಳು ಒದಗಿಸಿಕೊಡಲಾಗುತ್ತಿದೆಯೇ?